## ಮಾ.2ರಿಂದ 31ರವರೆಗೆ ಬಜೆಟ್ ಅಧಿವೇಶನಕ್ಕೆ ತಾತ್ಕಾಲಿಕ ವೇಳಾಪಟ್ಟಿ ಸಿದ್ಧ

# ಸುದೀರ್ಘ ಅಧಿವೇಶನಕ್ಕೆ ಸಜ್ಜು


ವಿಶ್ವವಾಣಿ 26-1-20

**ರಂಜಿತ್ ಎಚ್.ಅಶ್ವತ್ಥ** ಬೆಂಗಳೂರು

ಬಿಜೆಪಿಗೆ ಸದನ ನಡೆಸಲು ಆಸಕ್ತಿ ತೋರುತ್ತಿಲ್ಲ ಎನ್ನುವ ಪ್ರತಿಪಕ್ಷಗಳ ಟೀಕಾಸ್ತ್ರಕ್ಕೆ, ಪ್ರತ್ಯಾಸ್ತ್ರವಾಗಿ ಸುದೀರ್ಘ ಬಜೆಟ್ ಅಧಿವೇಶನ ನಡೆಸಲು ಸರಕಾರ ಸಿದ್ಧತೆ ನಡೆಸಿಕೊಂಡಿದೆ.

ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆಯುತ್ತಾ ಬಂದರೂ, ಪೂರ್ಣ ಪ್ರಮಾಣದಲ್ಲಿ ಉಭಯ ಸದನದಲ್ಲಿ ಕಾರ್ಯ ಕಲಾಪ ನಡೆದಿಲ್ಲ. ಬೆಳಗಾವಿಯಲ್ಲಿ 15ದಿನ ನಡೆಯಬೇಕಿದ್ದ ಚಳಿಗಾಲದ ಅಧಿವೇಶನವನ್ನು ಪ್ರವಾಹದ ಹೆಸರಲ್ಲಿ ಬೆಂಗಳೂರಿನಲ್ಲಿ ಕೇವಲ ಮೂರು ದಿನಕ್ಕೆ ಸೀಮಿತಗೊಳಿಸಿ ನಡೆಸಲಾಯಿತು. ಬಳಿಕ ಜಂಟಿ ಅಧಿವೇಶವನ್ನು 10ದಿನ ನಡೆಸಬೇಕೆಂಬ ಲೆಕ್ಕಾಚಾರದಲ್ಲಿದ್ದರೂ ಮುಖ್ಯಮಂತ್ರಿ ದಾವೋಸ್ ಪ್ರವಾಸದಿಂದ ಅದನ್ನು ರದ್ದುಗೊಳಿಸಿ, ಫೆ.17, 21ಕ್ಕೆ ಸೀಮಿತಗೊಳಿಸಿ ಅಧಿವೇಶನ ನಡೆಸಲು ತೀರ್ಮಾನಿಸಲಾಗಿತ್ತು. ಹೆಚ್ಚು ಅಧಿವೇಶನ ನಡೆಸದೇ ಇರುವ ಸರಕಾರದ ಕ್ರಮವನ್ನು ಪ್ರತಿಪಕ್ಷಗಳು ಟೀಕಿಸಿದ್ದವು. ಆದ್ದರಿಂದ ಬಜೆಟ್ ಅಧಿವೇಶನವನ್ನು 30 ದಿನ ನಡೆಸಲು ಸಿದ್ಧತೆ ನಡೆಸಿಕೊಂಡಿದೆ.

ಜಂಟಿ ಅಧಿವೇಶನದ ಬಳಿಕ ಮಾ.5ರಂದು ಬಜೆಟ್ ನಡೆಸಲು ರಾಜ್ಯ



ಸರಕಾರ ತೀರ್ಮಾನಿಸಿದೆ. ಆದರೆ ಮಾ.2ರಂದೇ ಬಜೆಟ್ ಅಧಿವೇಶನ ನಡೆಸಿ, 5ರಂದು ಬಜೆಟ್ ಮಂಡಿಸಿ ಬಳಿಕ ಮಾರ್ಚ್ ತಿಂಗಳು ಪೂರ್ತಿ ಕಲಾಪವನ್ನು ನಡೆಸಲು ಮುಖ್ಯಮಂತ್ರಿ ಯಡಿಯೂರಪ್ಪ ತೀರ್ಮಾನಿಸಿದ್ದಾರೆ. ಈ ಸಂಬಂಧ ಈಗಾಗಲೇ ತಾತ್ಕಾಲಿಕ ವೇಳಾಪಟ್ಟಿಯನ್ನು ಸರಕಾರದ ಮುಖ್ಯ ಕಾರ್ಯದರ್ಶಿಗಳ ಕಚೇರಿಯಿಂದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಉಭಯ ಸದನದ ಕಾರ್ಯದರ್ಶಿಗಳಿಗೆ ರವಾನೆಯಾಗಿದೆ ಎಂದು ಮೂಲಗಳು ತಿಳಿಸಿವೆ.

**ಪ್ರತಿಪಕ್ಷಗಳಿಗೆ ಕಲಾಪದ ಮೂಲಕ ಉತ್ತರ?:** ಕೆಲ ದಿನಗಳ ಹಿಂದಷ್ಟೇ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್, ಜೆಡಿಎಸ್‌ನ ಹಲವು ನಾಯಕರು ಕಲಾಪವನ್ನು ನಡೆಸದೇ ಸರಕಾರ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಎನ್ನುವ ಆರೋಪವನ್ನು ಮಾಡಿದ್ದರು. ಆದ್ದರಿಂದ ಇದಕ್ಕೆ ಉತ್ತರಿಸಲು ಹಾಗೂ ಸದನ ನಡೆಸುವುದಕ್ಕೆ ನಮ್ಮ ಅಭ್ಯಂತರವಿಲ್ಲ ಎನ್ನುವುದನ್ನು ಸಾಬೀತುಪಡಿಸಲು ಮುಖ್ಯಮಂತ್ರಿಗಳು ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ. ಒಂದು ವೇಳೆ ತಾತ್ಕಾಲಿಕ ವೇಳಾಪಟ್ಟಿಯಂತೆ 30 ದಿನಗಳ ಕಾಲ ಬಜೆಟ್ ಅಧಿವೇಶನ ನಡೆದರೆ ಪ್ರತಿಪಕ್ಷಗಳ ಆರೋಪಗಳಿಗೆ ಉತ್ತರಿಸುವುದರೊಂದಿಗೆ, ಕಳೆದೊಂದು ದಶಕದಲ್ಲಿ ಅತಿಹೆಚ್ಚು ದಿನ ಬಜೆಟ್ ಅಧಿವೇಶನ ನಡೆಸಿದ ದಾಖಲೆ ಬರೆಯಬಹುದಾಗಿದೆ.

**ನಿಯಮ ಪಾಲನೆ ಸುಲಭ:**

ಈ ಹಿಂದೆ ಕಾಗೋಡು ತಿಮ್ಮಪ್ಪ ವಿಧಾನ ಸಭಾಧ್ಯಕ್ಷರಾಗಿದ್ದಾಗ ಪ್ರತಿವರ್ಷ ಕನಿಷ್ಠ 60 ದಿನ ಉಭಯ ಸದನ ನಡೆಸಬೇಕು. ಇದು ಸರಕಾರದ ಹೊಣೆ ಎನ್ನುವ ನಿಯಮವನ್ನು ರೂಪಿಸಿದರು. ಆದರೆ 2014ರಿಂದ ಇಲ್ಲಿವರೆಗೆ ಈ ನಿಯಮ ಪರಿಪೂರ್ಣವಾಗಿ ಪಾಲನೆಯಾಗಿಲ್ಲ. 2015ರಲ್ಲಿ 58 ದಿನ ವಿಧಾನಸಭೆ ಹಾಗೂ 59 ದಿನ ವಿಧಾನ ಪರಿಷತ್ ನಡೆದಿದ್ದು ಇಲ್ಲಿಯವರೆಗಿನ ದಾಖಲೆಯಾಗಿದೆ. ಆದರೆ ಈಗ 30 ದಿನ ಬಜೆಟ್ ಅಧಿವೇಶನ ನಡೆಸಿದರೆ, ಈ ವರ್ಷಾಂತ್ಯಕ್ಕೆ 60 ದಿನಗಳ ಸದನ ನಡೆಸುವುದು ಸರಕಾರಕ್ಕೆ ಸುಲಭವಾಗಲಿದೆ ಎನ್ನುವ ವಿಶ್ಲೇಷಣೆ ಶುರುವಾಗಿದೆ.

### ಯಾವ ವರ್ಷ, ಎಷ್ಟು ದಿನ ಅಧಿವೇಶನ ನಡೆದಿದೆ?

| ವರ್ಷ | ವಿಧಾನಸಭೆ | ವಿಧಾನಪರಿಷತ್ |
|---|---|---|
| 2014 | 53 | 34 |
| 2015 | 58 | 59 |
| 2016 | 55 | 32 |
| 2017 | 40 | 40 |
| 2018 | 33 | 38 |
| 2019 | 18 | 18 |

### ಸವಾಲುಗಳೇನು?

- ಪ್ರತಿಪಕ್ಷಗಳು ಬಾವಿಗಿಳಿದು ಧರಣಿ ನಡೆಸದಂತೆ, ಸಭಾತ್ಯಾಗ ಮಾಡದಂತೆ ನೋಡಿಕೊಳ್ಳಬೇಕು
- ಪ್ರತಿಪಕ್ಷಗಳ ಟೀಕಾಸ್ತ್ರವನ್ನು ಸಮರ್ಥವಾಗಿ ಎದುರಿಸಬೇಕು
- ಆಡಳಿತ ಪಕ್ಷದ ಶಾಸಕರು ಗೈರಾಗದಂತೆ ಎಚ್ಚರವಹಿಸಬೇಕು
- ಸುದೀರ್ಘ ನಡೆಸುವುದರಿಂದ, ಸಚಿವರ, ಮುಖ್ಯಮಂತ್ರಿಗಳ ವೇಳಾಪಟ್ಟಿ ಸಜ್ಜುಗೊಳಿಸಬೇಕು
- ಡಿಯಾವ ಬಿಲ್‌ಗಳನ್ನು ಮಂಡಿಸಬಹುದೆಂಬ ಲೆಕ್ಕಾಚಾರ ಈಗಿನಿಂದಲೇ ಶುರುವಾಗಬೇಕು
- ಆಡಳಿತ, ಪ್ರತಿಪಕ್ಷ ಶಾಸಕರು ಕಲಾಪದಿಂದ ವಿಮುಖರಾಗದಂತೆ ನೋಡಿಕೊಳ್ಳಬೇಕು

### ಕಳೆದ ವರ್ಷ ಎರಡೂವರೆ ದಿನ ಮಾತ್ರ ಚರ್ಚೆ

**60 ದಿನ ಕಾರ್ಯಕಲಾಪ ನಡೆಯಬೇಕೆಂಬ ನಿಯಮವಿದ್ದರೂ, 2019ರಲ್ಲಿ ವಿಧಾನಸಭೆ ಹಾಗೂ ವಿಧಾನಪರಿಷತ್‌ನಲ್ಲಿ ಕೇವಲ 18 ದಿನ ಕಲಾಪ ನಡೆದಿವೆ. ಮೈತ್ರಿ ಸರಕಾರ ಉಳಿಸಿಕೊಳ್ಳುವ ಧಾವಂತದಲ್ಲಿ ಕಾಂಗ್ರೆಸ್- ಜೆಡಿಎಸ್, ಸರಕಾರವನ್ನು ಬೀಳಿಸಿ ಅಧಿಕಾರದ ಗದ್ದುಗೆಗೇರಬೇಕು ಎನ್ನುವ ಲೆಕ್ಕಾಚಾರದಲ್ಲಿ ಬಿಜೆಪಿ ಇದ್ದಿದ್ದರಿಂದ ಇಷ್ಟು ಕಡಿಮೆ ಅವಧಿಗೆ ಸದನ ನಡೆದಿದೆ. 18 ದಿನದಲ್ಲಿ ಬಹುತೇಕ ದಿನ ಧರಣಿ, ಬಾವಿಗಿಳಿದು ಪ್ರತಿಭಟನೆ, ಅವಿಶ್ವಾಸ ಮಂಡನೆಯಲ್ಲಿಯೇ ಕಳೆದಿವೆ. ಮೈತ್ರಿ ಸರಕಾರ ಬಿದ್ದು ಬಿಜೆಪಿ ಸರಕಾರ ಅಧಿಕಾರದ ಗದ್ದುಗೆ ಏರಿದಾಗ, ಮುಖ್ಯಮಂತ್ರಿ ಯಡಿಯೂರಪ್ಪ ಅವರು ಧನವಿನಿಯೋಗಕ್ಕೆ ಒಪ್ಪಿಗೆ ಪಡೆದಿದ್ದು ಹಾಗೂ ಸುಮಾರು ಎರಡೂವರೆ ದಿನ ನೆರೆ ಪರಿಸ್ಥಿತಿ ಬಗ್ಗೆ ಚರ್ಚೆ ನಡೆದಿದ್ದು ಮಾತ್ರ ಕಳೆದ ವರ್ಷದ ಸಾಧನೆ. ಇದನ್ನು ಹೊರೆತುಪಡಿಸಿದರೆ, 2014ರಿಂದ ಈಚೆಗೆ ಅತಿ ಕಡಿಮೆ ದಿನ ಹಾಗೂ ಕಡಿಮೆ ಚರ್ಚೆಯಾದ ವರ್ಷ ಎನ್ನುವ ಕಪ್ಪುಚುಕ್ಕೆಯನ್ನು ಕಳೆದ ವರ್ಷದ ಕಾರ್ಯಕಲಾಪಕ್ಕೆ ಅಂಟಿದೆ.**